ಅ) ಬೀದರ್ ಜಿಲ್ಲೆಯ ಕಾರಂಜಿ ಯೋಜನೆಯ ಕಾರ್ಯವನ್ನು ಎಂದು ಪ್ರಾರಂಭಿಸಲಾಗಿತ್ತು ;

ಆ) ಅಂದಿನಿಂದ ಈವರೆಗೆ ಆಗಿರುವ ವೆಚ್ಚವೆಷ್ಟು ;

ಇ) ಇದನ್ನು ಪೂರ್ತಿಗೊಳಿಸಲು ಎಷ್ಟು ಸಮಯ ಹಾಗು ವೆಚ್ಚವುಂಟಾಗಬಹುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ೧೯೭೨ನೇ ಇಸವಿ ಡಿಸೆಂಬರ್ ಮಾಹೆಯಲ್ಲಿ ಪ್ರಾರಂಭವಾಯಿತು.

ಆ) ಅಂದಿನಿಂದ ೧೯೮೩ನೇ ಇಸವಿ ಜುಲೈ ಮಾಹೆಯವರೆಗೆ ರೂ. ೧೮.೬೬ ಕೋಟಿ ವೆಚ್ಚವಾಗಿರುತ್ತದೆ.

ಇ) ರಾಜ್ಯದ ಸಂಪನ್ಮೂಲದ ಮೇಲೆ ನೀರಾವರಿ ವಲಯದ ಹಣದ ಲಭ್ಯತೆಯನ್ನನುಸರಿಸಿ, ಈ ಯೋಜನೆಯನ್ನು ೧೯೮೯–೯೦ರ ವೇಳೆಗೆ ಪೂರ್ಣಗೊಳಿಸುವ ಕಾರ್ಯಕ್ರಮ ಹಾಕಲಾಗಿದೆ ಮತ್ತು ಯೋಜನೆಯ ಪರಿಷ್ಕೃತ ಅಂದಾಜಿನಂತೆ ಒಟ್ಟು ೫೧.೫೩ ಕೋಟಿ ವೆಚ್ಚವುಂಟಾಗುವುದು.

ಬಾಗಲ ಕೋಟೆನವ ನಗರ ನಿರ್ಮಾಣದ ಬಗ್ಗೆ.

೨೯೭. ಶ್ರೀ ವಿ. ಎಸ್. ಆಚಾರ (ಉಡುಪಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ :—

ಅ) ನಾರಾಯಣಪುರ (ಅಲಮಟ್ಟಿ) ಅಣೆಯ ಎತ್ತರವನ್ನು ಹೆಚ್ಚಿಸುವ ನಿರ್ಧಾರದ ನಂತರ ಬಾಗಲ ಕೋಟೆ ನಗರವು ಮುಳುಗಡೆಯಾಗುವುದರಿಂದ ನವ ಬಾಗಲಕೋಟೆ ನಗರ ನಿರ್ಮಾಣದ ಬಗ್ಗೆ ಸೂಕ್ತ ಸ್ಥಳವನ್ನು ಆರಿಸಲಾಗಿದೆಯೇ ;

ಆ) ನವ ಬಾಗಲಕೋಟೆ ನಗರ ನಿರ್ಮಾಣದ ಘೋಷಣೆಯಾದ ನಂತರ ಇಂದಿನವರೆಗೆ ಈ ಬಗ್ಗೆ ಆಗಿರುವ ಪ್ರಗತಿ ಏನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಇಲ್ಲ.

ಆ) ಸರ್ಕಾರವು ದಿನಾಂಕ ೨೪–೮–೮೩ ರಂದು ಹೊರಡಿಸಿರುವ ಆಜ್ಞೆಯಲ್ಲಿ ಒಂದು ಕ್ರಿಯಾ ಯೋಜನಾ ಸಮಿತಿಯನ್ನು (Action Plan Committee) ರಚಿಸಿದೆ, ಮತ್ತು ಒಂದು ಬಾಗಲಕೋಟೆ ನಗರ ಅಭಿವೃದ್ಧಿ ಮಂಡಳಿಯನ್ನು (Bagalkot Town Development Authority) ರಚಿಸಲು ಒಪ್ಪಿಗೆ ನೀಡಿದೆ. ಕ್ರಿಯಾ ಯೋಜನಾ ಸಮಿತಿಯು ಈ ಕೆಳಕಂಡ ವಿಷಯುಗಳ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸಬೇಕಾಗಿದೆ.

೧) ಬಾಗಲಕೋಟೆ ನಗರವನ್ನು ಸ್ಥಳಾಂತರಿಸುವ ವಿಷಯದಲ್ಲಿ ಉದ್ಭವಿಸಂವ ಸಮಸ್ಯೆಗಳನ್ನು ಗುರುತಿಸಿ ಅದಕ್ಕೆ ತೆಗೆದುಕೊಳ್ಳಬೇಕಾದ ಕ್ರಮಗಳು.

೨) ಅಲಮಟ್ಟಿ ಅಣೆಕಟ್ಟನ್ನು ಎತ್ತರಿಸುವ ಅವಧಿಯನ್ನು ಅವಲಂಬಿಸಿ ಬಾಗಲಕೋಟೆ ನವ ನಗರದ ನಿರ್ಮಾಣವನ್ನು ಪೂರ್ತಿಗೊಳಿಸಬೇಕಾಗುವ ಅವಧಿ.

೩) ಇದಕ್ಕೆ ಎಷ್ಟು ಹಣ ಬೇಕು ಹಾಗೂ ಸಂಪನ್ಮೂಲಗಳು ಮತ್ತು

೪) ಬೇಕಾಗುವ ಸಿಬ್ಬಂದಿವರ್ಗ.

ಸಮಿತಿಯು ೩ ತಿಂಗಳುಗಳೊಳಗೆ ತನ್ನ ವರದಿಯನ್ನು ನೀಡಬೇಕಾಗಿದೆ.

ಕ್ರಿಯಾ ಯೋಜನಾ ಸಮಿತಿಯು ಸೂಚಿಸುವ ಕ್ರಿಯಾ ಯೋಜನೆಯನ್ನು ಬಾಗಲಕೋಟೆ ನಗರ ಅಭಿವೃದ್ಧಿ ಮಂಡಳಿಯು ಕಾರ್ಯರೂಪಕ್ಕೆ ತರುತ್ತದೆ.

ಮಂಂದಿನ ಕ್ರಮವನ್ನು ಕ್ರಿಯಾ ಯೋಜನಾ ಸಮಿತಿಯ ವರದಿ ಬಂದ ನಂತರ ತೆಗೆದುಕೊಳ್ಳಲಾಗುವುದು.